

# ಗಣಿತ ಕಲಿಕೆಗೆ ಹೊಸ ಆ್ಯಪ್

**ಸರ್ಕಾರಿ ಶಾಲಾ ಮಕ್ಕಳಿಗೆ ಗಣಿತವನ್ನು ಅತ್ಯಂತ ಸುಲಭ ಹಾಗೂ ಸುಲಲಿತವಾಗಿ ಕಲಿಯಲು ‘ಅಕ್ಷರ ಫೌಂಡೇಶನ್’ ಹೊಸ ಆ್ಯಪ್ ಅನ್ನು ಕಂಡುಹಿಡಿದಿದೆ. ‘ಬಿಲ್ಡಿಂಗ್ ಬ್ಲಾಕ್ಸ್ ಎಂಬ ಆ್ಯಪ್ ಮೂಲಕ ಗಣಿತ ಗೇಮ್‌ಗಳನ್ನು ಆಡುತ್ತಲೇ ಕಲಿಯುವುದರಿಂದ ಮಕ್ಕಳು ಬೇಗನೆ ವಿಷಯವನ್ನು ಗ್ರಹಿಸಲು ಸಾಧ್ಯವಾಗುತ್ತದೆ.**

**■ ಉಮಾ ಅನಂತ್**

ಕೆಲವು ಮಕ್ಕಳಿಗೆ ಗಣಿತ ಇಷ್ಟದ, ಅತ್ಯಂತ ಸುಲಭ ಹಾಗೂ ಪೂರ್ಣ ಅಂಕ ಗಳಿಸುವ ವಿಷಯವಾದರೆ ಇನ್ನು ಕೆಲವು ಮಕ್ಕಳಿಗೆ ಗಣಿತ ಎಂದರೆ ಅದು ‘ಕಬ್ಬಿಣದ ಕಡಲೆ’. ಸರ್ಕಾರಿ ಶಾಲೆ ಮಕ್ಕಳಂತೂ ಗಣಿತವನ್ನು ಕಲಿಯುವುದು ಎಂದರೆ ತುಂಬ ಹಿಂದೇಟು ಹಾಕುತ್ತಾರೆ. ಇದಕ್ಕೆ ಕಾರಣ ನಮ್ಮ ಪಠ್ಯದಲ್ಲಿ ನಿರೂಪಿಸಿರುವ ಸರಳವಲ್ಲದ ಕಲಿಕಾ ವಿಧಾನ.

ಇದು ಡಿಜಿಟಲ್ ಯುಗ. ಮಕ್ಕಳು ಮೊಬೈಲ್‌ನಲ್ಲಿ ಆಟವಾಡುವುದನ್ನು ಬಹಳ ಇಷ್ಟಪಡುತ್ತಾರೆ. ಸ್ಮಾರ್ಟ್‌ಫೋನ್‌ನಲ್ಲಿ ಆಟವಾಡುತ್ತಲೇ ಕಠಿಣ ಗಣಿತವನ್ನು ಸುರಳೀತಗೊಳಿಸಬಹುದು. ಇದಕ್ಕಾಗಿ ಬೆಂಗಳೂರಿನ ‘ಅಕ್ಷರ ಫೌಂಡೇಷನ್’ ಹೊಸ ಗಣಿತ ಆ್ಯಪ್ ಒಂದನ್ನು ಕಂಡುಹಿಡಿದಿದ್ದು ಸರ್ಕಾರಿ ಶಾಲೆ ಮಕ್ಕಳಿಗೆ ಗಣಿತವನ್ನು ಬಾಳೆಹಣ್ಣು ತಿಂದಷ್ಟು ಸುಲಭಗೊಳಿಸಿದೆ. ‘ಬಿಲ್ಡಿಂಗ್ ಬ್ಲಾಕ್ಸ್’ ಆ್ಯಪ್ ಹೆಸರಿನಲ್ಲಿ ಗಣಿತದ ಮೂಲಪಾಠವಾದ ‘ಕೂಡಿಸು, ಕಳೆ, ಗುಣಿಸು, ಭಾಗಿಸು’ ಅನ್ನು ಅತ್ಯಂತ ಸುಲಭವಾಗಿ ಕಲಿಯಲು ಅನುವು ಮಾಡಿಕೊಟ್ಟಿದೆ.

ಗಣಿತವನ್ನು ಬಹಳಷ್ಟು ವಿನೋದ ಮತ್ತು ಚಟುವಟಿಕೆಗಳ ಸಹಾಯದಿಂದ ಕಲಿಸಲು ಸಾಧ್ಯ. ಗಣಿತ ಆ್ಯಪ್ ಮೂಲಕ ವಾರದಲ್ಲಿ ಎರಡು ಗಂಟೆಗಳ ಕಾಲ ಗಣಿತದ ಬೋಧನೆಯನ್ನು ಅಕ್ಷರ ಫೌಂಡೇಶನ್ ಕಲಿಸುತ್ತಿದೆ. ಬಡ ಮಕ್ಕಳು, ಮನೆಯಲ್ಲಿ ತಂದೆ ತಾಯಿ ವಿದ್ಯಾಭ್ಯಾಸ ಇಲ್ಲದೆ ಮಕ್ಕಳಿಗೆ ಗಣಿತ ಹೇಳಿ ಕೊಡಲು ಅಸಾಧ್ಯವಾಗಿರುವವರು, ಕಲಿಕೆಗೆ ಬೇಕಾದ ಸವಲತ್ತುಗಳನ್ನು ಹೊಂದದೇ ಇರುವಂಥವರಿಗೆ ಈ ಮೊಬೈಲ್ ಆ್ಯಪ್ ಬಹಳ ಉಪಯುಕ್ತ.

‘ಕೆಲವು ಸರ್ಕಾರಿ ಶಾಲೆಗಳಲ್ಲಿ ನುರಿತ ಗಣಿತ ಅಧ್ಯಾಪಕರು ಇರುವುದಿಲ್ಲ. ಅಂಥ ಶಾಲೆಗಳಿಗೆ ‘ಗಣಿತ ಕಲಿಕಾ ಆಂದೋಲನ ಕಿಟ್’ ನೀಡಿ ಕಲಿಕೆಯ ಗುಣಮಟ್ಟವನ್ನು ಹೆಚ್ಚಿಸಲಾಗುತ್ತದೆ. ಈ ಕೆಲಸವನ್ನು ಆರು ವರ್ಷಗಳಿಂದ ಮಾಡುತ್ತಿದ್ದೇವೆ’ ಎನ್ನುತ್ತಾರೆ ಅಕ್ಷರ ಫೌಂಡೇಷನ್‌ನ ಅಧ್ಯಕ್ಷ ಅಶೋಕ್ ಕಾಮತ್.

‘ಉತ್ತರ ಕರ್ನಾಟಕ ಭಾಗಗಳಲ್ಲಿ ಕೆಲವು ಸರ್ಕಾರಿ ಶಾಲೆಗಳಲ್ಲಿ ಮೊಬೈಲ್ ಆ್ಯಪ್‌ನಲ್ಲಿ ಸುಲಭ ಗಣಿತ ಕಲಿಕೆಗೆ ಚಾಲನೆ ನೀಡಿದೆವು. ರಾಯಚೂರು, ಬಳ್ಳಾರಿ, ಬೀದರ್, ಕಲಬುರಗಿ, ಕೊಪ್ಪಳ ಜಿಲ್ಲೆಗಳಲ್ಲಿ ಮೊದಲು ಮಾಡಿದೆವು. ಒಟ್ಟು 12 ಜಿಲ್ಲೆಗಳಲ್ಲಿ ಆ್ಯಪ್‌ಮೂಲಕ ಕಲಿಕೆಗೆ ಅವಕಾಶ ಮಾಡಿಕೊಡುವ ಪ್ರಯೋಗ ಮಾಡಿದ್ದೇವೆ. ಮಕ್ಕಳು ಖುಷಿಯಿಂದ ಕಲಿಯುತ್ತಿದ್ದಾರೆ. ಫಲಿತಾಂಶವೂ ಬಹಳಷ್ಟು ಸುಧಾರಿಸಿದೆ’ ಎನ್ನುತ್ತಾರೆ ಅವರು.

ಒಂದರಿಂದ ಐದನೇ ತರಗತಿವರೆಗಿನ ಮಕ್ಕಳಿಗೆ ‘ಬಿಲ್ಡಿಂಗ್ ಬ್ಲಾಕ್ಸ್ ಆ್ಯಪ್’ ನ್ನು ಅಭಿವೃದ್ಧಿಪಡಿಸಲಾಗಿದೆ. ಇದು ಫ್ರೀ ಆ್ಯಪ್ ಆಗಿದ್ದು ಗೂಗಲ್ ಪ್ಲೇ